**ಓ.ಎಸ್.ನಂಃ 186/2023**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 15.03.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ ಜಿ ವಕೀಲರಿಂದಃ**

ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಬೆಂಗಳೂರಿನ ಪಾರ್ಮಿಕಲ್ ಸೆಂಟರ್ ನಲ್ಲಿ 29 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಅಕ್ಕನ ಹೆಸರು ಚೆಲುವಮ್ಮ. ಅವರು ಅಂಕಹಳ್ಳಿ ಗ್ರಾಮಕ್ಕೆ ವಿವಾಹ ಆಗಿರುತ್ತಾರೆ. ನನ್ನ ಅಣ್ಣನ ಹೆಸರು ಶಂಕರ. ಅವರು KSRTC ನಿಗಮ, ಗುಂಡ್ಲುಪೇಟೆ ಡಿಪೋ ಇಲ್ಲಿ ಮೆಕಾನಿಕಲ್ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಅವರು 30 ವರ್ಷಗಳಿಂದ ಗುಂಡ್ಲುಪೇಟೆ ಡಿಪೋದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ದಾವೆಯನ್ನು ಪ್ರತಿವಾದಿ ವಿರುದ್ಧ ವಿಭಾಗಕ್ಕಾಗಿ ಹೂಡಿರುತ್ತೇನೆ. ಸರ್ವೇ ನಂಃ 370 ರ ವಿಸ್ತೀರ್ಣ 5 ಎಕರೆ 39 ಗುಂಟೆ, ಸರ್ವೇ ನಂಃ 49 ರಲ್ಲಿ 1 ಎಕರೆ, ಸರ್ವೇ ನಂಃ 146 ರಲ್ಲಿ 1 ಎಕರೆ 17 ಗುಂಟೆ ಆಸ್ತಿಗಳ ಮೇಲೆ ಈ ದಾವೆಯನ್ನು ಹೂಡಿರುತ್ತೇನೆ. ಮೇಲೆ ಹೇಳಿದ ಆಸ್ತಿಗಳು ಒಂದು ಯರಿಯೂರಿನಲ್ಲಿದ್ದು. ಉಳಿದ ಆಸ್ತಿಗಳು ಹೆಗ್ಗವಾಡಿ ಗ್ರಾಮದಲ್ಲಿರುತ್ತವೆ. ನನ್ನ ತಾಯಿ ಹೆಸರು ಗೋಪಮ್ಮ. ನನ್ನ ತಾಯಿಗೆ ಓದಲು ಬರೆಯಲು ಬರುವುದಿಲ್ಲ. ನನ್ನ ತಾಯಿ ಸಹಿ ಮಾಡುತ್ತಿರಲಿಲ್ಲ. ದಾವ ಆಸ್ತಿಗಳು ಮೂಲತಃ ನನ್ನ ತಂದೆಗೆ ಸೇರಿದ ಆಸ್ತಿಗಳಾಗಿರುತ್ತವೆ. ದಾವ ಆಸ್ತಿಗಳು ನನ್ನ ತಂದೆಗೆ ಹೇಗೆ ಬಂದವು ನನಗೆ ಗೊತ್ತಿಲ್ಲ. ದಾವ ಆಸ್ತಿಗಳು ನನ್ನ ತಂದೆಗೆ ಸೇರಿದ ಆಸ್ತಿಗಳು ಎಂದು ಆರ್ ಟಿ ಸಿ ನೋಡಿದಾಗ ನನಗೆ ತಿಳಿಯಿತು. ಐಟಂ ನಂಃ5 ರ ಆಸ್ತಿಯು 1ನೇ ಪ್ರತಿವಾದಿ ಮತ್ತು ನನ್ನ ತಾಯಿ ಹೆಸರಿನಲ್ಲಿರುತ್ತವೆ. ಉಳಿದ ಆಸ್ತಿಗಳು ಪ್ರತಿವಾದಿ ಹೆಸರಿನಲ್ಲಿವೆ. ಯಾವ ವರ್ಷದಲ್ಲಿ 1ನೇ ಪ್ರತಿವಾದಿ ಮತ್ತು ನನ್ನ ತಾಯಿ ಹೆಸರಿಗೆ ದಾವ ಆಸ್ತಿಯು ಯಾವಾಗ ಖಾತೆ ಆಗಿದೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮರಣ ಹೊಂದಿ ಸು 2 ವರ್ಷ ಆಗಿದೆ. ನನ್ನ ತಾತನ ಹೆಸರು ಮರಿಗಂಡಯ್ಯ. ನನ್ನ ತಾತನಿಗೆ ಇಬ್ಬರು ಗಂಡು ಮಕ್ಕಳು. ಅವರ ಹೆಸರು ಚೆಲುವಯ್ಯ ಮತ್ತು ಚಿಕ್ಕಚೆಲುವಯ್ಯ. ಚೆಲುವಯ್ಯ ನನ್ನ ದೊಡ್ಡಪ್ಪ ಎಂದರೆ ಸರಿ. ನನ್ನ ದೊಡ್ಡಪ್ಪನಿಗೆ ವಿವಾಹವಾಗಿ ಮಕ್ಕಳು ಇದ್ದರು ಎಂದರೆ ಸರಿ. ಅವರಿಗೆ 3 ಜನ ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು. ಅವರ ಹೆಸರು ವೈಕುಂಠ ಮೂರ್ತಿ, ವೈರಮುಡಿ, ರಾಜು, ಚೆಲುವಮ್ಮ ಮತ್ತು ಮತ್ತೊಬ್ಬರ

ಹೆಸರು  ನನಗೆ ಗೊತ್ತಿಲ್ಲ. ಚೆಲುವಯ್ಯರವರ ವಿಭಾಗಕ್ಕೆ ಹೋದ ಆಸ್ತಿಗಳ ಬಗ್ಗೆ  ನನಗೆ ಗೊತ್ತಿಲ್ಲ. ನನಗೆ ರಾಜಮುನಿ ಎಂಬ ಒಂದೇ ಹೆಸರು ಇರುತ್ತದೆ. ದಾಖಲಾತಿಗಳಲ್ಲಿ ನನ್ನ ಹೆಸರು ಶ್ರೀಕಾಂತ್ ಎಂದು ಇದೆ ಎಂದರೆ ಸರಿಯಲ್ಲ. ದಾವ ಆಸ್ತಿಗಳಲ್ಲಿ ನನ್ನ ತಾಯಿ ಜೀವಂತ ಇರುವಾಗಲೇ ನನ್ನ ಮತ್ತು ಪ್ರತಿವಾದಿ ನಡುವೆ ವಿಭಾಗ ಆಗಿತ್ತು ಎಂದರೆ ಸರಿಯಲ್ಲ.

ದಿಃ27.04.1994 ರಂದು ನನ್ನ ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಇದೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ನಮ್ಮ ಊರಿನ ಕರಿಯಪ್ಪ, ವೆಂಕರಾಮಯ್ಯ, ಮಲ್ಲಿಕಾರ್ಜುನ, ವೆಂಕಟರಾಜು, ಹುಲುಗಾದ್ರಿರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ನನ್ನ ತಾಯಿ ಸಹ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ 1ನೇ ವಾದಿ ಪ್ರತಿವಾದಿಗೆ ರಮೇಶ ವಕೀಲರ ಮೂಲಕ ನೋಟೀಸು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.  ನೋಟೀಸು ಕೊಟ್ಟಾಗ ಪ್ರತಿವಾದಿ ಮತ್ತು ನಾವು ವಿಭಾಗ ಮಾಡಿಕೊಂಡು ವಿಭಾಗ ಪತ್ರವನ್ನು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ವಿಭಾಗ ಪತ್ರದಂತೆ ಪ್ರತಿವಾದಿಯು ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ನಾನು ಮತ್ತು ನನ್ನ ತಾಯಿ ತಕರಾರು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ತಕರಾರು ರೀತ್ಯ ಆರ್ ಆರ್ ಟಿ 4/1995-96 ರಂತೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನನ್ನ ಅಣ್ಣ 1ನೇ ವಾದಿಯು ಹಾಜರಾಗಿದ್ದರು ಎಂದರೆ ಸರಿಯಲ್ಲ. ದಿಃ25.01.1996 ರಲ್ಲಿ ರೆವಿನ್ಯೂ ಅಧಿಕಾರಿಯು 1ನೇ ಪ್ರತಿವಾದಿ ಸಲ್ಲಿಸಿರುವ ಅರ್ಜಿ ಪ್ರಕಾರ ಖಾತೆ ಬದಲಾವಣೆ ಮಾಡಬೇಕು ಎಂದು ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಆದೇಶವಾದ ನಂತರ ಅದರ ಪ್ರತಿಯನ್ನು 1ನೇ ಪ್ರತಿವಾದಿಗೆ ಮತ್ತು ನನ್ನ ತಾಯಿಗೆ ಕಳಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರೆವಿನ್ಯೂ ಅಧಿಕಾರಿ ಮಾಡಿದ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಮೇಲ್ಮನವಿ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಈ ಮೇಲ್ಕಂಡ ಎಲ್ಲಾ ವಿಚಾರಗಳು ನನಗೆ ಮತ್ತು ಇತರೆ ವಾದಿಗಳಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ವಿಭಾಗದ ನಂತರ ಖಾತೆ ಬದಲಾವಣೆ ಆಗಿ 1ನೇ ಪ್ರತಿವಾದಿಯು ಅವರ

ವಿಭಾಗಕ್ಕೆ ಬಂದ ಆಸ್ತಿಗಳನ್ನು ಯಾರಿಯೂರು ಗ್ರಾಮದ ಬಿಳಿಗಿರಯ್ಯ ಮತ್ತು ಶಿವಪ್ಪರವರಿಂದ ವ್ಯವಸಾಯ ಮಾಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಕಾಳಪ್ಪರವರ ಮಗ ಶಿವಪ್ಪ ನನಗೆ ಗೊತ್ತಿಲ್ಲ. ಕಾಳಪ್ಪರವರ ಮಗ ಶಿವಪ್ಪರವರು ನನ್ನ ವಿಭಾಗಕ್ಕೆ ಬಂದ ಆಸ್ತಿಗಳನ್ನು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮೇಲ್ಕಂಡ ಎಲ್ಲಾ ವಿಚಾರವನ್ನು ಮುಚ್ಚು ಮರೆ ಮಾಡಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವ ಆಸ್ತಿಯಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಈ ಹಂತದಲ್ಲಿ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ